# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** M/s Gamesa Renewable Private Limited ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ಹೊಳಲ್ಕೆರೆ ಮತ್ತು ಜಗಳೂರು ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ 90 ಮೆ.ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಹಂಚಿಕೆ ಆದೇಶ ನೀಡುವ ಬಗ್ಗೆ.

**ಓದಲಾಗಿದೆ:**
1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರ ಏಕ ಕಡತ ಸಂಖ್ಯೆ: 1429 –G
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ದಿನಾಂಕ: 19.12.2016 ರ ಹಂಚಿಕೆ ಸಮಿತಿ ಸಭೆ ನಡವಳಿಗಳು.

* * *

ಪ್ರಸ್ತಾವನೆ :-

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರ ಏಕ ಕಡತ ಪದ್ಧತಿಯಡಿಯಲ್ಲಿ M/s Gamesa Renewable Private Limited ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ಹೊಳಲ್ಕೆರೆ ಮತ್ತು ಜಗಳೂರು ತಾಲ್ಲೂಕುಗಳ ನೆಲ್ಲಿಕಟ್ಟೆ ದಿಬ್ಬದಹಟ್ಟಿ, ಬಿದರಕೆರೆ, ಗೊಲ್ಲರಹಟ್ಟಿ, ಅಜ್ಜಪ್ಪನಹಳ್ಳಿ, ಯಲಗೋಡು, ಗೊಲ್ಲರಹಳ್ಳಿ, ಬಸ್ತಿಹಳ್ಳಿ, ಹುಲ್ಲೆಹಾಲ್, ಅಡವಿಗೊಲ್ಲರಹಳ್ಳಿ, ಗುಟ್ಟಿದುರ್ಗ, ಕಲ್ಗೆರೆ, ಸಾವಲಗಟ್ಟ, ಕಕ್‌ಬಾಲು, ಹೊಸಹಟ್ಟಿ, ಹರಲಕಟ್ಟೆ, ಹೆಗ್ಗದೆಹಾಳು, ರಾಮರಹಳ್ಳಿ, ರಂಗವ್ವನಹಳ್ಳಿ ಮತ್ತು ಕಸವನಹಳ್ಳಿ ಗ್ರಾಮಗಳಲ್ಲಿ 90 ಮೆ.ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಸ್ಥಾಪಿಸಲು 90 ಮೆ.ವ್ಯಾ ಸಾಮರ್ಥ್ಯಕ್ಕೆ ನಿಗದಿತ ಶುಲ್ಕವನ್ನು ಪಾವತಿಸಿ ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಿದ್ದು, ಸದರಿ ಯೋಜನಾ ಸ್ಥಳವು ಈಗಾಗಲೇ M/s Faya Renewables and Power Projects Private Limited ರವರಿಗೆ ದಿನಾಂಕ : 10.11.2016 ರನ್ವಯ ತತ್ವಶಃ ಪತ್ರ ನೀಡಲು ಅನುಮೋದನೆಗೊಂಡಿರುವ 64.5 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಿಂಪಡೆದು ಹಾಗೂ ಸದರಿ ಸ್ಥಳದ ಅಲ್ಪ ಭಾಗ M/s Chauhan Wind Energy ರವರಿಗೆ ಹಂಚಿಕೆಯಾಗಿರುವ 6.5 ಮೆ.ವ್ಯಾ ಯೋಜನಾ ಸ್ಥಳದಲ್ಲಿರುತ್ತದೆ. ಸದರಿಯವರಿಗೆ ಹಂಚಿಕೆಯಾಗಿ 7 ವರ್ಷವಾದರೂ ಯಾವುದೇ ಪ್ರಗತಿ ಸಾಧಿಸದ ಕಾರಣ ದಿನಾಂಕ : 15.06.2016 ರಂದು Show Cause Notice ನೀಡಿದ್ದು, ಆದರೆ ಇದುವರೆವಿಗೂ ಯಾವುದೇ ಪ್ರತಿಕ್ರಿಯೆ ಬಂದಿರುವುದಿಲ್ಲವೆಂದು ತಿಳಿಸಿರುತ್ತಾರೆ. ಸರ್ಕಾರದ ಆದೇಶ ಸಂಖ್ಯೆ : ಇಎನ್ 172 ಎನ್‌ಸಿಇ 2017 ದಿನಾಂಕ : 05.05.2017 ರ ಆದೇಶದಲ್ಲಿ M/s Chauhan Wind Energy ಕಂಪನಿಗೆ ಮೈಸೂರು, ಚಿತ್ರದುರ್ಗ ಮತ್ತು ಗದಗ ಜಿಲ್ಲೆಗಳಲ್ಲಿ ಹಂಚಿಕೆಯಾಗಿರುವ 63 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ರದ್ದುಪಡಿಸಲಾಗಿರುತ್ತದೆ. M/s Gamesa Renewable Private Limited ಕಂಪನಿಯ ನೆಟ್‌ವರ್ತ್ ದಿನಾಂಕ: 31.03.2016 ರ ಅಂತ್ಯಕ್ಕೆ ರೂ.1881.81 ಕೋಟಿಗಳೆಂದು ಚಾರ್ಟೆಡ್ ಅಂಕೌಂಟೆಂಟ್‌ರವರು ದೃಢೀಕರಿಸಿರುವ ಪತ್ರ ಹಾಗೂ ಬ್ಯಾಲೆನ್ಸ್ ಶೀಟ್‌ಗಳನ್ನು ಕಂಪನಿಯು ಸಲ್ಲಿಸಿರುತ್ತದೆ. ಸದರಿ ಕಂಪನಿಯ Registrar of Companies, Ministry of Corporate Affairs, Government of India, Chennai ಇಲ್ಲಿ ದಿನಾಂಕ: 31.07.2015 ರಂದು CIN ಸಂಖ್ಯೆ U74991TN2006PTC079179 ರಲ್ಲಿ ನೋಂದಣಿಯಾಗಿರುತ್ತದೆ. M/s Gamesa Renewable Private Limited ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ಹೊಳಲ್ಕೆರೆ ಮತ್ತು ಜಗಳೂರು ತಾಲ್ಲೂಕುಗಳ ಗ್ರಾಮಗಳಲ್ಲಿ 90 ಮೆ.ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಸ್ಥಾಪಿಸಲು ಯೋಜನೆಗೆ ಸಂಬಂಧಿಸಿದ ತಾಂತ್ರಿಕ ವಿವರಗಳು, ಸ್ಥಳದ ಮಾಹಿತಿ, ಅಕ್ಷಾಂಶ ಮತ್ತು ರೇಖಾಂಶ ಇನ್ನಿತರೆ ವಿವರಗಳೊಂದಿಗೆ ಈ ಕೆಳಕಂಡ ಶೆಡ್ಯೂಲ್‌ನಲ್ಲಿರುವಂತೆ ಹಂಚಿಕೆ ಮಾಡಲು ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಲ್ ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

...2)